**30.12.2019**

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**

**<u>ಪತ್ರಿಕಾ ಪ್ರಕಟಣೆಯ ಕೃಪೆಗಾಗಿ</u>**

# ಕರ್ನಾಟಕ ರಾಜ್ಯ ಸರ್ಕಾರವು ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದ ದೌರ್ಜನ್ಯ ಹಾಗು ಹಿಂಸೆಯ ಕುರಿತು ಮಕ್ಕಳು ಹಾಗು ಮಹಿಳೆಯರ ಹಕ್ಕೊತ್ತಾಯಕ್ಕೆ ಕಿವಿಗೊಡಲೇಬೇಕೆಂದು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ ಆಗ್ರಹಿಸುತ್ತದೆ

ಮದ್ಯ ನಿಷೇಧ ಆಂದೋಲನದ ಅಂಗವಾಗಿ 4000 ಮಹಿಳೆಯರು ಪೂರ್ಣಗೊಳಿಸಿರುವ ರಾಜ್ಯದಾದ್ಯಂತದ 200 ಕಿಲೋಮೀಟರ್‌ಗಳಷ್ಟು ಕಾಲ್ನಡಿಗೆ ಜಾಥಕ್ಕೆ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯು ಸಂಪೂರ್ಣ ಬೆಂಬಲವನ್ನು ನೀಡುತ್ತದೆ. ರಾಜ್ಯ ಸರ್ಕಾರವು ಈ ಆಂದೋಲನವು ಎತ್ತುತ್ತಿರುವ ಸಮಸ್ಯೆಗಳಿಗೆ ಈವರೆಗೂ ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ಇದ್ದು, ಮಹಿಳೆಯರು ಹಾಗು ಮಕ್ಕಳು ಮದ್ಯಕ್ಕೆ ಸಂಬಂಧಿಸಿ ಅನುಭವಿಸುತ್ತಿರುವ ಶೋಷಣೆ ಹಾಗು ನಿಂದನೆಗಳಿಗೆ ಕಿವುಡಾಗಿದೆ. ರಾಜ್ಯ ಸರ್ಕರದ ಮದ್ಯ ಮಾರಾಟದಿಂದ ಬರುವ ಆದಾಯದ ಮೇಲಿನ ಗಾಬರಿಗೊಳಿಸುವಂತಹ ಅವಲಂಬನೆಯಿಂದಾಗಿ ಹೆಚ್ಚುತ್ತಿರುವ ಮದ್ಯ ಮಾರಾಟ ಹಾಗು ಅಕ್ರಮ ಮದ್ಯ ಮಾರಾಟಗಳ ವ್ಯತಿರಿಕ್ತ ಪರಿಣಾಮಗಳನ್ನು ಕುರಿತು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ.

ಮದ್ಯದ ಸೇವನೆಯು ಭೀಕರವಾದ ಆರೋಗ್ಯ ಮತ್ತು ಸಾಮಾಜಿಕ ವೆಚ್ಚಗಳಿಗೆ ನೇರವಾಗಿ ಜವಾಬ್ದಾರಿಯುತವಾಗಿದ್ದರೂ (70% ರಷ್ಟು ಮಹಿಳೆಯರ ಮೇಲಿನ ದೌರ್ಜನ್ಯ ಹಾಗು 80% ರಷ್ಟು ಕೌಟುಂಬಿಕ ದೌರ್ಜನ್ಯಕ್ಕೆ ಇದು ಕಾರಣ), ರಾಜ್ಯ ಸರ್ಕಾರವು ಮದ್ಯಪಾನದ ಮಾರಾಟದಿಂದ ಸಿಗುವ ಅಬಕಾರಿ ಇಲಾಖೆಯ ಆದಾಯದ ಮಟ್ಟವನ್ನು ಹೆಚ್ಚಿಸುತ್ತಲೇ ಇರುವುದು ಅಮಾನವೀಯ. ನಿಮ್ಹಾನ್ಸ್ ಸಂಸ್ಥೆಯ ಒಂದು ಅಧ್ಯಯನದ ಪ್ರಕಾರ ಪ್ರತಿ ವರ್ಷ ಮದ್ಯಪಾನದ ಮಾರಾಟದಿಂದ ಬರುತ್ತಿರುವ ಆದಾಯದ ಗಳಿಕೆಯು 216 ಬಿಲಿಯನ್ ರುಪಾಯಿಗಳು. ಆದರೆ ಮದ್ಯಪಾನದ ಸೇವನೆಯಿಂದುಂಟಾಗುತ್ತಿರುವ ಗಣನೆಗೆ ಸಿಗದಿರುವಂತಹ ಹಲವಾರು ದುಷ್ಪರಿಣಮಗಳನ್ನು ಹೊರತು ಪಡಿಸಿಯೂ ಅದರ ವ್ಯತಿರಿಕ್ತ ಪರಿಣಾಮದಿಂದಾಗುವ ನಷ್ಟವು 244 ಬಿಲಿಯನ್ ರುಪಾಯಿಗಳೆಂದು ಅಂದಾಜು ಮಾಡಲಾಗಿದೆ!

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಸಹಯೋಗದಲ್ಲಿ ಕಾರ್ಯನಿರ್ವಹಿಸುವ ಉಡುಪಿ ಜಿಲ್ಲೆಯಲ್ಲಿನ ಭೀಮಾ ಸಂಘಟನೆ, ಮಕ್ಕಳ ಸಂಘಗಳು ಹಾಗು ಮಹಿಳೆಯರ ಸಂಘಗಳು ತಮ್ಮ ತಮ್ಮ ಪಂಚಾಯತ್‌ಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವ ಪ್ರತಿಯೊಂದು ಅಂಗಡಿ ಮುಂಗಟ್ಟುಗಳ ಸ್ಥಳದ ಕುರಿತ ಮಾಹಿತಿಯೊಂದಿಗೆ ಅಕ್ರಮ ಮದ್ಯ ಮಾರಾಟದಿಂದ ಉಂಟಾಗುತ್ತಿರುವ ಸಮಸ್ಯೆಗಳನ್ನು ಸತತವಾಗಿ ಎರಡು ವರ್ಷಗಳಿಂದ ಎತ್ತುತ್ತಿದ್ದಾರೆ. ರಾಜ್ಯ ಸರ್ಕಾರ ಅವರಿಗೆ ಯಾವುದೇ ಸಹಾಯವನ್ನು ನೀಡಿಲ್ಲ. ಬದಲಿಗೆ ಸ್ಥಳೀಯವಾಗಿ ಅವರು ತಮ್ಮ ಪ್ರತಿನಿಧಿತ್ವದ ಹಕ್ಕನ್ನು ಚಲಾಯಿಸಿ ಈ ವಿಷಯದ ಬಗ್ಗೆ ಹೋರಾಟ ನಡೆಸಿದಾಗ ಅದಕ್ಕೆ ವಿರುದ್ಧವಾಗಿ ಅವರೇ ಪ್ರತಿಭಟನೆ ಎದುರಿಸಬೇಕಾಗಿದೆ. ಮದ್ಯದ ಸಂಪೂರ್ಣ ನಿಷೇಧವು ಈ ಸಮಸ್ಯೆಯ ಪರಿಹಾರವೇ ಎಂಬುದು ಇನ್ನೂ ಖಚಿತವಾಗಿಲ್ಲ. ಏಕೆಂದರೆ ಸಂಪೂರ್ಣ ನಿಷೇಧ ಜಾರಿಗೊಳಿಸಿರುವ ರಾಜ್ಯಗಳಲ್ಲಿ ಇದು ವಿಫಲವಾಗಿದೆ. ಆದರೆ ಮದ್ಯಕ್ಕೆ ಸಂಬಂಧಿಸಿದ ತೀವ್ರ ಹಾನಿ ಅನುಭವಿಸುತ್ತಿರುವ ಮಹಿಳೆಯರು ಹಾಗು ಮಕ್ಕಳ ಈ ತುರ್ತಿನ ಪರಿಸ್ಥಿತಿ ಸರ್ಕಾರಕ್ಕೆ ನಾಚಿಕೆ ಉಂಟುಮಾಡಲೇಬೇಕು. ಅತಿ ಹೆಚ್ಚು ಹಕ್ಕುಗಳ ಉಲ್ಲಂಘನೆ ಅನುಭವಿಸಿರುವ ಮಕ್ಕಳು ಹಾಗು ಮಹಿಳೆಯರೊಂದಿಗೆ ಸರ್ಕಾರ ಈ ಬಗ್ಗೆ ಕೂಡಲೇ ಸಮಾಲೋಚನೆ ನಡೆಸಿ ಪರಿಹಾರಗಳನ್ನು ತತ್ಕ್ಷಣ ಹುಡುಕಬೇಕು ಎಂಬುದರ ಬಗ್ಗೆ ಕಿಂಚಿತ್ತು ಅನುಮಾನ ಇಲ್ಲ.

ಕರ್ನಾಟಕ ಸರ್ಕಾರದ ಅಬಕಾರಿ ಇಲಾಖೆಯು ಹಣಕಾಸು ಇಲಾಖೆಯ ಆಡಳಿತದ ತೆಕ್ಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 2ನೇ ಅತಿದೊಡ್ಡ ಅದಾಯವನ್ನು ದಾಖಲಿಸುತ್ತಿರುವ ಇಲಾಖೆಯಾಗಿದೆ. ಮದ್ಯದ ಮಾರಾಟದಿಂದ ಬರುವ ಆದಾಯವು ರಾಜ್ಯ ಅಬಕಾರಿ ಇಲಾಖೆಯ ಆದಾಯದ ಶೇಕಡ 95% ರಷ್ಟು ಭಾಗ ಹೊಂದಿದ್ದು, ಅದು ಭಾರತದಲ್ಲಿ ತಯಾರಾದ ವಿದೇಶಿ ಮದ್ಯ ಮತ್ತು ಬಿಯರ್ ಮಾರಾಟದಿಂದ ಕೂಡಿರುವ ಅದಾಯವಾಗಿರುತ್ತದೆ. ಅಬಕಾರಿ ಇಲಾಖೆಯ ಅದಾಯವು 2007 – 08

ಸಾಲಿನಲ್ಲಿ 4,812 ಕೋಟಿ ರೂಪಾಯಿಗಳಿಂದ 2017 – 18 ರ ಸಾಲಿನಲ್ಲಿ 17,948.5 ಕೋಟಿ ರೂಪಾಯಿಗಳಷ್ಟು ಹೆಚ್ಚಳವಾಗಿದೆ. ಕಳೆದ 11 ವರ್ಷಗಳಲ್ಲಿ ಮದ್ಯ ಸೇವನೆ ಅಥವ ಅದರಿಂದ ಬರುತ್ತಿರುವ ಆದಾಯವು ಶೇಕಡ 7% ರಷ್ಟು ಹೆಚ್ಚಳವಾಗಿದೆ.

ರಾಜ್ಯದ ಅಬಕಾರಿ ಇಲಾಖೆಯು ನಿರ್ದಿಷ್ಟವಾಗಿ ಸಂಗ್ರಹಿಸಬೇಕಾದ ಹಣದ ಮೊತ್ತವು ಪ್ರತಿ ವರ್ಷವು ಹೆಚ್ಚುತ್ತಲೇ ಇದೆ. ಕಳೆದ 4 ವರ್ಷಗಳಲ್ಲಿ ನಿರ್ದಿಷ್ಟ ಗುರಿಯು ಹಿಂದಿನ ವರ್ಷಕ್ಕಿಂತ ಸುಮಾರ 800 ಕೋಟಿಗಳಷ್ಟು ಹೆಚ್ಚಾಗಿರುವುದು ಆಘಾತಕಾರಿ ಸಂಗತಿ. 2018 –2019 ಸಾಲಿನಲ್ಲಿ ನಿರ್ದಿಷ್ಟ ಗುರಿಯನ್ನು ಎರಡು ಬಾರಿ ಹೆಚ್ಚಿಸಲಾಗಿದೆ: ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು 17,000 ಕೋಟಿ ನಿರ್ದಿಷ್ಟ ಗುರಿಯನ್ನು ಫೆಬ್ರವರಿ 2018 ರಲ್ಲಿ 18,750 ಕೋಟಿಗಳಷ್ಟು ಹೆಚ್ಚಿಸಿದ್ದಾರೆ ಹಾಗು ಜುಲೈ 2018 ರಲ್ಲಿ 19,750 ಕೋಟಿಗಳಷ್ಟು ಪ್ರಸ್ತುತ ಸರ್ಕಾರವು ಹೆಚ್ಚಿಸಿದೆ. ಕರ್ನಾಟಕ ಹಾಗು ಉತ್ತರ ಪ್ರದೇಶ ರಾಜ್ಯಗಳು ದೇಶದಲ್ಲಿ ಅತಿ ಹೆಚ್ಚು ಮಳಿಗೆಗಳನ್ನು ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಕಳೆದ ಕೆಲವು ವರ್ಷಗಳಲ್ಲಿ ರಾಜ್ಯ ಸರ್ಕಾರವು ತನ್ನ ಅದಿಕೃತ ಮಾರುಕಟ್ಟೆಯ ಘಟಕವಾದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಎಂ.ಎಸ್.ಐ.ಎಲ್) ಮೂಲಕ 300 ಮಧ್ಯದ ಅಂಗಡಿಗಳನ್ನು ತೆರೆದಿದ್ದು, ಇದೇಗ 600 ಮಧ್ಯದ ಅಂಗಡಿಗಳನ್ನು ತೆರೆಯುವ ಪ್ರಕ್ರಿಯೆಯಲ್ಲಿದೆ. ಈ ಮೂಲಕ ಎಂ.ಎಸ್.ಐ.ಎಲ್ ಮಳಿಗೆಗಳು 1,360 ರಷ್ಟು ಆಗುತ್ತದೆ. ಇದೇಗ ಶ್ರೇಣಿ 2 ಹಾಗು ಶ್ರೇಣಿ 3 ನಗರ ಪ್ರದೇಶಗಳಲ್ಲಿ ಮಧ್ಯದ ಅಂಗಡಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತದೆ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ಹೆಸ ಮಾರುಕಟ್ಟೆಗಳನ್ನು ಸೃಷ್ಟಿಸಲಾಗುತ್ತಿದೆ. ಇದರೊಂದಿಗೆ 20,000 ಅಥವ ಕಡಿಮೆ ಜನಸಂಖ್ಯೆಯಿರುವ ನಗರ ಪ್ರದೇಶಗಳು, ಪಟ್ಟಣಗಳು ಹಾಗು ಪುರಸಭೆಗಳು ರಾಜ್ಯ ಹಾಗು ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಮಧ್ಯದ ಅಂಗಡಿಗಳ ಹಾಗು ಹಿಂದಿನ 500 ಮೀಟರ್‌ಗಳ ಬದಲು 220 ಮೀಟರ್‌ಗಳ ಮೇಲಿನ ನಿಷೇಧವನ್ನು ಸಡಿಲಗೊಳಿಸುವ ಸರ್ವೋಚ್ಚ ನ್ಯಾಯಾಲಯದ 2017 ರಲ್ಲಿನ ತೀರ್ಪಿನಿಂದಾಗಿ0, ಮದ್ಯದ ವ್ಯತಿರಿಕ್ತ ಪರಿಣಾಮಗಳಿಂದ ಬಳಲುತ್ತಿರುವ ಸಣ್ಣ ಸಮುದಾಯಗಳಿಗೆ ಈ ಸುಲಭವಾಗಿ ದೊರಕುವ ಮದ್ಯದಿಂದ ಹಾನಿ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.

ಅಕ್ರಮ ಮದ್ಯ ಮಾರಾಟವು ಪ್ರತಿದಿನ ಹೆಚ್ಚಾಗುತ್ತಿದ್ದು 18 ವರ್ಷದ ಕೆಳಗಿನವರು ಕುಡಿಯುವುದು ಹೆಚ್ಚುತ್ತಿದ್ದು ಇದು ಒಂದು ಸಾಂಕ್ರಾಮಿಕ ರೋಗವಾಗಿ ಹರಡುವ ಎಲ್ಲಾ ಲಕ್ಷಣಗಳನ್ನು ತೋರುತ್ತಿದೆ. ಇಂತಹ ನಕಾರಾತ್ಮಕ ಕ್ರಮಗಳಿಂದ ಈಗಾಗಲೇ ನೊಂದಿರುವ ಸಮುದಾಯಗಳ ದುರ್ಬಲತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಇಷ್ಟಾದರೂ ರಾಜ್ಯ ಸರ್ಕಾರವು ತನ್ನ ಜನರ ಕರೆಗಳಿಗೆ ಸ್ಪಂದಿಸದೆ ಇರುವುದು ಖಂಡನೀಯ.

2013 ರಲ್ಲಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಾದಕ ವಸ್ತುಗಳ ದುರುಪಯೋಗ ಹಾಗು ಮಾದಕ ವಸ್ತುಗಳ ಚಟದ ಕುರಿತು ಹೊರತಂದಿರುವ ಅಧ್ಯಯನ "Assessment of Pattern and Profile of Substance Use Children in India" ದ ಪ್ರಕಾರ ಕರ್ನಾಟಕ ಹಾಗು ಆಂಧ್ರ ಪ್ರದೇಶದಿಂದ ಬಂದಿರುವ ಬಹುತೇಕ (85% – 95%) ರಷ್ಟು 18 ವರ್ಷದ ಕೆಳಗಿನ ಮಕ್ಕಳು ಪ್ರಸ್ತುತವಾಗಿ ಮದ್ಯದ ಬಳಕೆಯನ್ನು ವರದಿ ಮಾಡಿದ್ದಾರೆ. 1976 ರಲ್ಲಿ ಕಾನೂನಾತ್ಮಕವಾಗಿ ಮದ್ಯವನ್ನು ಸೇವಿಸಬಲ್ಲವರ ವಯೋಮಿತಿಯನ್ನು 18 ರಿಂದ 21 ವರ್ಷಕ್ಕೆ ಹೆಚ್ಚಿಸಿದ್ದರೂ ಈವರೆಗೆ ಬೆಂಗಳೂರಿನ ಮದ್ಯ ಮಾರಾಟದ ಅಂಗಡಿಗಳ ಮಾಲೀಕರು ಹಾಗು ಮಾರಾಟಗಾರರ ಮೇಲೆ ಈ ಕಾನೂನಿಗ ಉಲ್ಲಂಘನೆಯ ಒಂದೇ ಒಂದು ಪ್ರಕರಣವೂ ದಾಖಲಾಗಿಲ್ಲ.

ಕರ್ನಾಟಕ ರಾಜ್ಯದಲ್ಲಿನ ಮಿಲಿಯಾಂತರ ಜನರ ಬದುಕನ್ನು ನಾಶಮಾಡುತ್ತಿರುವ ಈ ವಿಷಯದ ಕುರಿತು ಸಾರ್ವಜನಿಕ ಒಕ್ಕೊರಲು ಹಾಗು ಸಾಮೂಹಿಕ ಆಕ್ರೋಶವನ್ನು ವ್ಯಕ್ತಪಡಿಸಲು ಸಮಯವು ಇದು.

ಕವಿತಾ ರತ್ನ
ನಿರ್ದೇಶಕರು – ವಕೀಲಿ
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
ದೂರವಾಣಿ ಸಂಖ್ಯೆ: +91 – 9448990480